


ತಾನಪುರ
ಖುಂಟಿ
ತಾರದಾನ
ದಾಂಡಿ
ತಂತಿಗಳು
ನಕ್ಷಾ
ಗಲಾ
ತಬಲಿ
ಪತ್ತಾ
ಘೋಡಿ
ಕದ್ದೂ
ಮಣಕಾ
ಲಂಗೋಟ

**ಸಿತಾರ**

ಸಿತಾರ ವಾದ್ಯವು ಭಾರತೀಯ ವಾದ್ಯಗಳಲ್ಲಿಯೇ ಅತ್ಯಂತ ಜನಪ್ರಿಯ ವಾದ್ಯವಾಗಿದೆ. ಸ್ವತಂತ್ರವಾಗಿ ಬಾರಿಸಲ್ಪಡುವ ತಂತು ವಾದ್ಯಗಳಲ್ಲಿ ಒಂದು ಪ್ರಮುಖ ವಾದ್ಯ ಇದಾಗಿದೆ.

ಸಿತಾರ ವಾದ್ಯವೂ ತಂಬೂರಿ ವಾದ್ಯದಂತೆಯೇ ಇರುತ್ತದೆ. ಇದರ ಕುಂಬಳಕಾಯಿ(ತುಂಬಿ)ಯು ಚಿಕ್ಕದಾಗಿದ್ದು ಕಲಾತ್ಮಕವಾಗಿರುತ್ತದೆ. ಮುಖ್ಯವಾದ ಏಳು ತಂತಿಗಳನ್ನು ಹೊಂದಿರುತ್ತದೆ. ಈ ಏಳು ತಂತಿಗಳಲ್ಲಿ ಮೊದಲಿನ ತಂತಿ (ಬಾಜ ಕಾ ತಾರ್) ಯನ್ನು ಮಂದ್ರ ಸಪ್ತಕದ ಮಧ್ಯಮಕ್ಕೂ, ಎರಡನೆಯ ತಂತಿ (ಜೋಡ ಕಾ ತಾರ್)ಯನ್ನು ಮಂದ್ರ ಷಡ್ಜಕ್ಕೂ ಕೂಡಿಸಿರುವರು. ಮೂರನೆಯ ತಂತಿಗೆ ಖರ್ಜ ಪಂಚಮ ಎಂದು ಕರೆಯಲಾಗುತ್ತಿದ್ದು ಇದನ್ನು ಖರ್ಜ ಪಂಚಮಕ್ಕೆ ಶೃತಿಗೊಳಿಸಿರುತ್ತಾರೆ. ನಾಲ್ಕನೆಯದನ್ನು ಖರ್ಜ ಷಡ್ಜಕ್ಕೆ ಶೃತಿಗೊಳಿಸಲಾಗುತ್ತಿದ್ದು ಇದಕ್ಕೆ ಖರ್ಜ ಎನ್ನುವರು. ಐದನೆಯ ತಂತಿಯನ್ನು ಮಂದ್ರ ಪಂಚಮಕ್ಕೂ, ಆರನೆಯದನ್ನು ಮಧ್ಯ ಷಡ್ಜಕ್ಕೂ ಶೃತಿಗೊಳಿಸಿರುತ್ತಾರೆ. ಈ ತಂತಿಗೆ ಪಪಿಹಾ ಎಂದು ಕರೆಯುತ್ತಾರೆ. ಏಳನೆಯ ತಂತಿಯನ್ನು ಚಿಕಾರಿ ಎನ್ನಲಾಗುತ್ತಿದ್ದು ಇದನ್ನು ತಾರ ಷಡ್ಜಕ್ಕೆ ಶೃತಿಗೊಳಿಸಲಾಗುತ್ತದೆ. ಸಿತಾರದ ದಂಡಿಗೆಯ ಮೇಲೆ 16–21 ರವರೆಗೆ ಸ್ವರದರ್ಶಕ ಪರದೆಗಳನ್ನು ಕಟ್ಟಿರುತ್ತಾರೆ. ಅಲ್ಲದೇ ಹನ್ನೊಂದು ಅಥವಾ ಹದಿಮೂರು ಅತಿ ಚಿಕ್ಕ ಗಾತ್ರದ ತಂತಿಗಳನ್ನು ಜೋಡಿಸಲಾಗಿರುತ್ತದೆ. ಇದಕ್ಕೆ ತರಫ್ ಎನ್ನುವರು. ಇವು ಝೇಂಕಾರವನ್ನು ನೀಡುತ್ತವೆ. ಈ ವಾದ್ಯದಲ್ಲಿ 'ಮೀಂಡ್' 'ಗಮಕ' ಮುಂತಾದ ಸ್ವರ, ಸಂಗತಿಗಳನ್ನು ಪರಿಣಾಮಕಾರಿಯಾಗಿ ನುಡಿಸಲಾಗುತ್ತದೆ. ಸಿತಾರ್‌ನ ತಂತಿಗಳನ್ನು 'ಮಿಜರಾಫ್' ಎಂಬ ಉಕ್ಕಿನ ತಂತಿಯಿಂದ ಮಾಡಿದ ವಿಶೇಷ ಬಗೆಯ ಉಂಗುರವನ್ನು ತೋರುಬೆರಳಿನ ತುದಿಗೆ ಸಿಕ್ಕಿಸಿಕೊಂಡು ನುಡಿಸಲಾಗುತ್ತದೆ. ಸಿತಾರ ವಾದನದಲ್ಲಿ 'ಮಸೀದ ಖಾನಿ ಗತ್' ಹಾಗೂ 'ರಜಾಖಾನಿ ಗತ್' ಎಂಬ 2 ಪ್ರಕಾರದ ಗತ್‌ಗಳನ್ನು ನುಡಿಸಲಾಗುತ್ತದೆ. ಉಸ್ತಾದ ಮಸೀದ್ ಖಾನ್ ಎಂಬುವರಿಂದ ಪ್ರಚಾರಗೊಂಡ ಗತ್‌ಗೆ ಮಸೀದ್ ಖಾನೀ ಹಾಗೂ ಉ.ರಜಾಖಾನ್ ಎಂಬವರಿಂದ ಪ್ರಸಿದ್ಧಿಗೊಂಡ ಗತ್‌ಗೆ ರಜಾಖಾನಿ ಗತ್ ಎಂದು ಕರೆಯಲಾಗಿದೆ. ಮಸೀದಖಾನಿ ಗತ್ತನ್ನು ವಿಲಂಬಿತ ಲಯದಲ್ಲೂ, ರಜಾಖಾನೀ ಗತ್ತನ್ನು ದೃತಲಯದಲ್ಲೂ ನುಡಿಸಲಾಗುವುದು.


ಸಿತಾರ
ಖುಂಟಿ
ತಾರದಾನ
ಚಾಕಿ
ತಂತಿಗಳು
ಕಾಡಿ
ಪರದಾ
ತರಫ್ ಖುಂಟಿ
ತರಫ್‌ತಂತಿಗಳು
ನಕ್ಷಾಪಟ್ಟಿ
ಗಲಾ
ಗಲಾನಕ್ಷಾ
ಪತ್ತಾ
ಜುಲ್ಫ
ತರಫ್‌ಘೋಡಿ
ಬಡಾಘೋಡಿ
ಕದ್ದೂ
ತಬಲಿ
ಮಣಕಾ
ಲಂಗೋಟ

## ಹಾರ್ಮೋನಿಯಂ


ಈ ವಾದ್ಯವು ಕಟ್ಟಿಗೆಯ ಪೆಟ್ಟಿಗೆಯಲ್ಲಿ ಜೋಡಿಸಿದ ಚಿಕ್ಕ ಚಿಕ್ಕ ಸ್ವರ ತಂತುಗಳನ್ನು ಹೊಂದಿದ ವಾದ್ಯವಾಗಿದೆ. ಚರ್ಮದ ಪದರುಗಳ ತಿದಿ ಅಥವಾ ಬಾತಿಯಿಂದ ಗಾಳಿಯನ್ನು ಒದಗಿಸಿ ರೀಡ್ ಅಥವಾ ಮೆಟ್ಟಿಲುಗಳನ್ನು ಬೆರಳುಗಳಿಂದ ಮೃದುವಾಗಿ ಒತ್ತಿದಾಗ ಬೇರೆ ಬೇರೆ ಸ್ವರಗಳು ಹೊರ ಹೊಮ್ಮುತ್ತದೆ. ಹಾರ್ಮೋನಿಯಂನಲ್ಲಿ ಮೂರೂ ಸಪ್ತಕಗಳನ್ನು ಸರಾಗವಾಗಿ ನುಡಿಸಬಹುದಾಗಿದೆ. ಹಿಂದೂಸ್ತಾನಿ ಸಂಗೀತದಲ್ಲಿ ಗಾಯಕರಿಗೆ ಸಹ ವಾದ್ಯವಾಗಿ ಉಪಯೋಗಿಸುವ ಈ ವಾದ್ಯದಿಂದ ಇತ್ತೀಚೆಗೆ ಸ್ವತಂತ್ರವಾದನವನ್ನೂ ಮಾಡಲಾಗುತ್ತದೆ.

## ತಬಲಾ

ತಬಲಾ ವಾದ್ಯದಲ್ಲಿ 'ತ ಬಲಾ' ಹಾಗೂ 'ಡಗ್ಗಾ' ಎಂಬ ಎರಡು ಅಂಗಗಳಿವೆ. ತಬಲಾವನ್ನು ಕಟ್ಟಿಗೆಯಿಂದ ಮಾಡಲಾಗುವುದು. ಡಗ್ಗಾವನ್ನು ಮಣ್ಣಿನಿಂದ ಮಾಡಲಾಗುತ್ತಿದ್ದರೂ ಅನುಕೂಲಕ್ಕಾಗಿ ತಾಮ್ರ, ಹಿತ್ತಾಳೆ ಹಾಗೂ ಸ್ಟೀಲನ್ನು ಬಳಸಿ ನಿರ್ಮಿಸಲಾಗುವುದು. ಪೊಳ್ಳಾದ ತಬಲಾ ಹಾಗೂ ಡಗ್ಗಾದ ಬಾಯಿಗೆ ಚರ್ಮವನ್ನು ಮುಚ್ಚಿ ಚರ್ಮದ ದಾರವನ್ನು(ಬಾರನ್ನು) ಆ ಮುಚ್ಚಿಗೆಗೆ ಪೋಣಿಸಿ ಭದ್ರ ವಾಗಿ ಬಿಗಿದು ನಾದ ಹೊರಹೊಮ್ಮುವ ಂತೆ ಸಿದ್ಧಗೊಳಿಸಲಾಗುತ್ತದೆ. ಚರ್ಮದ ಬಾರಿಗೆ ಸಿಕ್ಕಿಸಿರುವ ಗಟ್ಟಿಗಳನ್ನು ಮೇಲೆ ಅಥವಾ ಕೆಳಗೆ ಸರಿಸುವ ಮೂಲಕ ಸ್ವರವನ್ನು ಇಳಿಸುವ ಅಥವಾ ಏರಿಸುವಂತೆ ಮಾಡಬಹುದಾಗಿದೆ. ಸಾಮಾನ್ಯವಾಗಿ ತಬಲಾವನ್ನು ಸಂಗೀತಗಾರರಿಗೆ ಅನುಕೂಲವಾದ ಸ್ವರಕ್ಕೆ ಹೊಂದಿಸಿ ಶೃತಿ ಮಾಡಲಾಗುತ್ತದೆ.

ಹಿಂದೂಸ್ತಾನಿ ಸಂಗೀತ ಕ್ಷೇತ್ರದಲ್ಲಿ ಲಯ ಅಥವಾ ತಾಲ ನಿರ್ದೇಶನಕ್ಕಾಗಿ ಮುಖ್ಯವಾಗಿ ಬಳಕೆಯಾಗುವ ತಬಲಾ ವಾದ್ಯವು ಸ್ವತಂತ್ರವಾದನ ಕ್ಷೇತ್ರದಲ್ಲೂ ಅತ್ಯಂತ ಜನಪ್ರಿಯ ವಾದ್ಯವಾಗಿ ಪ್ರಚಾರದಲ್ಲಿದೆ.

ಹಾರ್ಮೋನಿಯಂ


ಭಾತೆ
ಸ್ವರಪೀಪಿಗಳು
ಕೀಲಿಮಣೆಗಳು
ಹಿಡಿಕೆ
ವಾಯುಬಿರಡೆಗಳು

ತಬಲಾ


ಶ್ಯಾಯಿ
ಲವ
ಕಿನಾರಾ
ಗಜರಾ
ಬಾರ
ಗಟ್ಟಿ
ಪಡಗಾ
ಸಿಂಬೆ
ಶ್ಯಾಯಿ
ಲವ
ಕಿನಾರಾ
ಗಜರಾ
ಬಾರ
ಪಡಗಾ
ಸಿಂಬೆ

## ಪ್ರಾಯೋಗಿಕ ವಿಭಾಗ

### ಗಾಯನ ಮತ್ತು ಸಿತಾರ ವಾದನದ ರಾಗಗಳ ವರ್ಣನೆ

| | | | |
|---|---|---|---|
| 1. | **ರಾಗ** | **–** | **ಭೂಪ** |
| | ಥಾಟ | – | ಕಲ್ಯಾಣ |
| | ಜಾತಿ | – | ಔಡವ |
| | ವಾದಿ | – | ಗಾಂಧಾರ |
| | ಸಂವಾದಿ | – | ಧೈವತ |
| | ವ್ಯರ್ಜಸ್ವರ | – | ಮಧ್ಯಮ ಮತ್ತು ನಿಷಾಧ |
| | ರಸ | – | ಗಂಭೀರ ಮತ್ತು ಶಾಂತರಸ |
| | ಅಂಗ | – | ಪೂರ್ವಾಂಗ |
| | ಸ್ವರಗಳು | – | ಎಲ್ಲಾ ಶುದ್ಧ ಸ್ವರಗಳು |
| | ಗಾಯನ ಸಮಯ | – | ರಾತ್ರಿ ಪ್ರಥಮ ಪ್ರಹರ |
| | ಆರೋಹ | – | ಸಾ ರೆ ಗ ಪ ದ ಸಾ̍ |
| | ಅವರೋಹ | – | ಸಾ̍ ಧ ಪ ಗ ರೆ ಸಾ |
| | ಪಕ್ಕಡ | – | ಗ ರೆ ಸಾ ದ ಸಾ ರೆ ಗ ಪ ಗ ದ ಪ ಗ |
| 2. | **ರಾಗ** | **–** | **ದುರ್ಗಾ** |
| | ಥಾಟ | – | ಬಿಲಾವಲ |
| | ಜಾತಿ | – | ಔಡವ |
| | ವಾದಿ | – | ಮಧ್ಯಮ |
| | ಸಂವಾದಿ | – | ಷಡ್ಜ |
| | ವ್ಯರ್ಜ | – | ಗಾಂಧಾರ ಮತ್ತು ನಿಷಾಧ |
| | ರಸ | – | ಧೀರವೀರ ಮತ್ತು ಗಂಭೀರ |
| | ಅಂಗ | – | ಪೂರ್ವಾಂಗ |
| | ಸ್ವರಗಳು | – | ಎಲ್ಲಾ ಶುದ್ಧ ಸ್ವರಗಳು |
| | ಆರೋಹ | – | ಸಾ ರೆ ಮ ಪ ದ ಸಾ̍ |
| | ಅವರೋಹ | – | ಸಾ̍ ದ ಪ ಮ ರೆ ಸಾ |
| | ಪಕ್ಕಡ | – | ದಮ ರೆಪ |

| | | | |
|---|---|---|---|
| **3.** | **ರಾಗ** | – | **ಕಾಫಿ** |
| | ಥಾಟ | – | ಕಾಫಿ |
| | ಜಾತಿ | – | ಸಂಪೂರ್ಣ |
| | ವಾದಿ | – | ಪಂಚಮ |
| | ಸಂವಾದಿ | – | ರಿಷಭ |
| | ರಸ | – | ಶೃಂಗಾರ |
| | ಸ್ವರಗಳು | – | ಗ ಮತ್ತು ನಿ ಕೊಮಲ ವಿದ್ದು ಉಳಿದೆಲ್ಲ ಸ್ವರಗಳು ಶುದ್ಧ |
| | ಗಾಯನ ಸಮಯ | – | ಮಧ್ಯರಾತ್ರಿ |
| | ಆರೋಹ | – | ಸಾ ರೆ ಗ ಮ ಪ ದ ನಿ ಪ ದ ಸಾ |
| | ಅವರೋಹ | – | ಸಾ ನಿ ದ ಪ ಮ ಗ ರೆ ಸಾ ನಿ ದ ಸಾ |
| | ಪಕ್ಕಡ | – | ರೆ ಮ ಪ ದ ಮ ಪ ಗ ರೆ |
| **4.** | **ರಾಗ** | – | **ಬೃಂದಾವನಿ** |
| | ಥಾಟ | – | ಕಾಫಿ |
| | ಜಾತಿ | – | ಜೌಡವ |
| | ವಾದಿ | – | ರಿಷಭ |
| | ಸಂವಾದಿ | – | ಪಂಚಮ |
| | ವ್ಯರ್ಜ | – | ಗ ಮತ್ತು ಧ |
| | ರಸ | – | ವೀರ |
| | ಅಂಗ | – | ಪೂರ್ವಾಂಗ |
| | ಸ್ವರಗಳು | – | ನಿಷಾದಿ ಆರೋಹದಲ್ಲಿ ಶುದ್ಧ ಅವರೋಹಣದಲ್ಲಿ ಕೋಮಲ |
| | ಗಾಯನ ಸಮಯ | – | ದಿನದ ಎರಡನೇ ಪ್ರಹರ |
| | ಆರೋಹ | – | ನಿ ಸಾ ರೆ ಮ ಪ ನಿ ಸಾ |
| | ಅವರೋಹ | – | ಸಾ ನಿ ಪ ಮ ರೆ ಸಾ |
| | ಪಕ್ಕಡ | – | ನಿ ಸಾ ರೆ ಸಾ ನಿ ಪ ನಿ ಸಾ |

| | | | |
|---|---|---|---|
| **5.** | **ರಾಗ** | **–** | **ಭೈರವ** |
| | ಥಾಟ | – | ಭೈರವ |
| | ಜಾತಿ | – | ಸಂಪೂರ್ಣ |
| | ವಾದಿ | – | ಮಧ್ಯಮ |
| | ಸಂವಾದಿ | – | ಷಡ್ಜ |
| | ವ್ಯರ್ಜ | – | ಯಾವುದೇ ಸ್ವರವಿಲ್ಲ ಸ |
| | | – | ಗಂಭೀರ |
| | ಅಂಗ | – | ಪೂರ್ವಾಂಗ |
| | ಸ್ವರಗಳು | – | ರೆ ಮತ್ತು ಧ ಕೊಮಲ ವಿದ್ದು ಉಳಿದೆಲ್ಲ ಸ್ವರಗಳು ಶುದ್ಧ |
| | ಗಾಯನ ಸಮಯ | – | ಪ್ರಾತಃಕಾಲ |
| | ಆರೋಹ | – | ಸಾ ರೆ ಗ ರೆ ಮ ಪ ದ ನಿ ಸ̇। |
| | ಅವರೋಹ | – | ಸಾ ನಿ ದ ಪ ಮ ಗ ರೆ ಸಾ। |
| | ಪಕ್ಕಡ | – | ರೆ ಗ ಮ ಪ ಮ ಗ ರೆ ಸಾ। |
| **6.** | **ರಾಗ** | **–** | **ಭಾಗೇಶ್ರೀ** |
| | ಥಾಟ | – | ಕಾಫಿ |
| | ಜಾತಿ | – | ಔಡವ ಸಂಪೂರ್ಣ |
| | ವಾದಿ | – | ಮಧ್ಯಮ |
| | ಸಂವಾದಿ | – | ಷಡ್ಜ |
| | ವ್ಯರ್ಜ | – | ಆರೋಹದಲ್ಲಿ ರೆ ಮತ್ತು ಪ |
| | ರಸ | – | ಗಂಭೀರ |
| | ಅಂಗ | – | ಪೂರ್ವಾಂಗ |
| | ಸ್ವರಗಳು | – | ಗಾಂಧಾರ ಮತ್ತು ನಿಷಾಧ ಕೊಮಲ ಉಳಿದವು ಶುದ್ಧ |
| | ಗಾಯನ ಸಮಯ | – | ಮಧ್ಯರಾತ್ರಿ |
| | ಆರೋಹ | – | ನಿ ಸಾ ಗ ಮ ದ ನಿ ಸಾ |
| | ಅವರೋಹ | – | ಸ̇ಾ ನಿ ದ ಮ ಪ ದ ಮ ಗರೆ ಸಾ |
| | ಪಕ್ಕಡ | – | ದ ನಿ ಸ ಮ – – – ಗ ರೆ ಸಾ |

## ಮಾದರಿ ಘೋಟಾಖ್ಯಾಲ್, ರಾಗ– ಕಾಫಿ, ಧೃತ್ ತೀನತಾಲ

ಆರೋಹ : ಸಾ ರೆ ಗ ಮ ಪ ಧ ನಿ ಸಾ ।

ಅವರೋಹ : ಸಾ ನಿ ಧ ಪ ಮ ಗ ರೆ ಸಾ ।

ಪಕ್ಕಡ : ಸಾಸಾ. ರೆರೆ. ಗಗ. ಮಮ. ಪ. ರೆಗಮಪ ।

### ಸ್ಥಾಯಿ —

| | | | |
|---|---|---|---|
| ರೆಮ ಪಧ ಪ ಗ | – ರೆ ಮ ಮ | ಪ – ಪ _ _ | _ ರೆ ಮ |
| ಖೇsss ಲೋ ಶ್ಯಾs | s _ ಮ ಸಂ ಗ | ಹೋ s ರಿ sss | ss ಆ ಜ |
| 0 | 3 | × | 2 |

| | | | |
|---|---|---|---|
| ಧ ಧ ಧ – | ನಿ ನಿ ಪ ಧ | ಮ ಪ ಪಧ ನಿಸಾ | ನಿ ಧ ಮ ಪ |
| ಪಿ ಚ ಕಾ s | ರಿ s ರಂ ಗ | ಭ ರಿ ಕೇ sss | ಸ ರ ಕೀ s |
| 0 | 3 | × | 2 |

### ಅಂತರಾ

| | | | |
|---|---|---|---|
| ಧ ಮ ಪ ಧ | ಸಾ – ಸಾ ಸಾ | ರೆ ಗ ರೆ ಸಾ | ನಿ ಸಾ ನಿ ಧ |
| ಕು ವ ರ ಕ | ನ್ಹೈ s ಯಾ s | ಸಂ ಗ ಸ ಖಿ | ರಾ s ಧಾ s |
| 0 | 3 | × | 2 |

| | | | |
|---|---|---|---|
| ಸಾ ಸಾ ಸಾ ರೆ | ನಿ ನಿ ಧ ಪ | ಪಧ ನಿಸಾ ನಿ ಸಾ | ನಿ ಧ ಮ ಪ |
| ರಂ ಗ ಭ ರಿ | ಜೋ s ರಿ s | ಸೋ sss ಹ ತ | ರಿ s ಆ ಜ |
| 0 | 3 | × | 2 |

**ಮಾದರಿ ಲಕ್ಷಣಗೀತೆ, ರಾಗ–ಭೂಪ, ತಾಲ – ತ್ರಿತಾಲ**

**ಆ: ಸಾ ರೆ ಗ ಪ ಧ ಸಾ**

**ಅ: ಸಾ ಧ ಪ ಗ ರೆ ಸಾ**

## ಸ್ಥಾಯಿ

| | | | |
|---|---|---|---|
| ಧ ಸಾಧ ಪ | ಗ ರೆ ಸಾ ರೆ | ಗ – ಗ ಪ | ಗರೆಗರೆ ಸಾ ಸಾ |
| ಗಾ ಽ ವ ತ | ಗು ನಿ ಜ ನ | ಮೇ ಽ ಲ ಸು | ಸಂಽ ಽಽಽ ಗ ತ |
| 0 | 3 | × | 2 |

| | | | |
|---|---|---|---|
| ಸಾಸಾ ಧ ಪ | ಸಾ ಸಾ ಸಾ –ಗ | ಪ ಧ ಸಾ ಧ | ಸಾಧ ಪಪಗರೆಸಾ |
| ವ ರ ಜ ಮ | ನಿ ಽ ಭೂ ಽ | ಪಾ ಽ ಲಿ ಸು | ಚೆಽ ರಽ ಸೂಽರ |
| 0 | 3 | × | 2 |

## ಅಂತರಾ

| | | | |
|---|---|---|---|
| ಪ ಗ ಗ ಗ | ಪ ಪ ದ ದ | ಸಾ – ಸಾ ಸಾ | ದ ರೆ ಸಾ ಸಾ |
| ಪ್ರಥ ಮ ಪ್ರ | ಹ ರ ನಿ ಸಿ | ಗಾ ಽ ನ ಸು | ಹಾ ಽ ವ ತ |
| 0 | 3 | × | 2 |

| | | | |
|---|---|---|---|
| ಸಾ ರೆ ಗ ರೆ | ಗ – ಗ – | ರೆ – ಸಾ ದ | ಸಾ – ಸಾ ಸಾ |
| ಗ ದ ವಾ ದಿ | ಽ ಽ ಸಂ ಽ | ವಾ ಽ ದಿ ಕ | ಽ ಹಾ ವ ತ |
| 0 | 3 | × | 2 |

| | | | |
|---|---|---|---|
| ಗ – ಗ ರೆ | ಗ ಪ ದ ನಾ | ದ ಸಾ ದ ಪ | ಗಪದಪ ಗರೆ ಸಾ |
| ಔ ಽ ಡ ವ | ರ ಚ ನಾ ಽ | ಅ ತಿ ಮ ನ | ಬ್ರಾಽ ಽಽ ವಽ ತ |
| 0 | 3 | × | 2 |

**ಮಾದರಿ ರಜಾಖಾನಿ ಗತ್, ರಾಗ–ಭೂಪ, ತಾಲ– ತ್ರಿತಾಲ**

**ಆ: ಸಾ ರೆ ಗ ಪ ಧ ಸಾ**

**ಅ: ಸಾ ಧ ಪ ಗ ರೆ ಸಾ**

### ಅಸ್ತಾಯಿ

| | | | |
|---|---|---|---|
| ಗ – ಗ ರೆ | ಗ ಪಪ ಧ ಪ | ಗ ರೆರೆ ಗ ರೆಸಾ | ಧ ಸಾ ರೆ |
| ದಾ – ದಾ ರಾದಾ | ದಿರ ದಾ ರಾ ದಾ | ದಿರ ದಾ ರಾ ದಾ | ರಾ ದಾ ರಾ |
| × | 2 | 0 | 3 |

### ಮಾಂಝಾ

| | | | |
|---|---|---|---|
| ಗ – ಗ ರೆ | ಸಾ ಧ ಸಾ ಸಾ | – ಸಾಸಾ ರೆ ಸಾ | ಧ ಧ ಪ – |
| ದಾ – ದಾ ರಾದಾ | ದಿರ ದಾ ರಾ – ದಿರ | ದಾ ರಾದಾ ರಾ ದಾ | – |
| × | 2 | 0 | 3 |
| ಧ ಸಾಸಾ ರೆ,ಸಾ ರೆ | ಗ, ರೆ ಗಗ ಪ, | ಗ ಪಪ ಧ, ಪ | ಧಧ ಸಾ ರೆ |
| ದಾ ದಿರ ದಾ, ದಾ | ದಿರ ದಾ, ದಾ ದಿರ | ದಾ, ದಾ ದಿರ ದಾ, | ದಾ ದಿರ ದಾ ರಾ |
| × | 2 | 0 | 3 |
| ಗ– ಸಾ – ಧ | – ಪ – ಗ | ರೆರೆ ಗ ರೆ ಸಾ | ಧ ಸಾ ರೆ |
| ದಾ – ರಾ – | ದಾ – ರಾ – | ದಾ ದಿರ ದಾ ರಾ | ದಾ ರಾ ದಾ ರಾ |
| × | 2 | 0 | 3 |

### ಅಂತರಾ

| | | | |
|---|---|---|---|
| ಗ – ಗ ರೆ | ಗಪಪ ಧ ಪ | ಧ ಸಾಸಾ ರೆ ಗ | ರೆ ಸಾಸಾ ಧ ಸಾ |
| ದಾ – ದಾ ರಾ | ದಾ ದಿರ ದಾ ರಾ | ದಾ ದಿರ ದಾ ರಾ | ದಾ ದಿರ ದಾ ರಾ |
| × | 2 | 0 | 3 |
| ಗಗರೆ –ರೆ ಸಾ | ಧ ಸಾಸಾ ಧ ಪ | ಗ ರೆರೆ ಗ ರೆ | ಸಾ ಧ ಸಾ ರೆ |
| ದಾ ರದಾ –ರ ದಾ | ದಾ ದಿರ ದಾ ರಾ | ದಾ ದಿರ ದಾ ರಾ | ದಾ ರಾ ದಾ ರಾ |
| × | 2 | 0 | 3 |

**ಉದಾಹರಣೆ 4. ತೋಡಾ ರಜಾಖಾನಿ ಗತ್, ರಾಗ–ಭೂಪ, ತಾಲ–ತ್ರಿತಾಲ**

| × | 0 | | |
|---|---|---|---|
| ಗ – ಗ ರೆ ಗ ಪಪ ಧ ಪ | ಗರೆ ಗರೆ ಗಪಧಪ | ಗರೆಗರೆ ಸಾಧ ಸಾರೆ | |
| " | ಗರೆ ಗಪ ಧಸಾ ಧಪ | ಗರೆಗರೆ ಸಾಧ ಸಾರೆ | |
| " | ಸಾರೆ ಗರೆ ಗಪಧಪ | ಗರೆಗರೆ ಸಾಧ ಸಾರೆ | |
| " | ಸಾರೆ ಗಪ ಧಸಾ ರೆಗ | ರೆಸಾಧಪಗರೆ ಸಾರೆ | |

**ಉದಾಹರಣೆ 5. ಝ್ಯಾಲಾ , ರಾಗ–ಭೂಪ, ತಾಲ– ತ್ರಿತಾಲ**

| × | | 0 | |
|---|---|---|---|
| ಗ – – – | ಗ – – – | ರೆ – – – | ರೆ – – – |
| ಸಾ – – – | ಸಾ – – – | ಸಾ – – – | ಸಾ – – – |
| ಧ – – – | ಸಾ – – – | ರೆ – – – | ಸಾ – – – |
| ಧ – – – | ಸಾ – – – | ಧ – – – | ಪ – – – |
| ಧ – – – | ಸಾ – – – | ರೆ – – – | ಸಾ – – – |
| ಧ – – – | ಸಾ – – – | ರೆ – – – | ರೆ – – – |
| ಗ – – – | ಗ – – – | ಗ – – – | ಗ – – – |
| ಗ – – – | ಪ – – – | ಧ – – – | ಧ – – – |
| ಸಾ – – – | ಸಾ – – – | ಸಾ – – – | ಸಾ – – – |

**ತಿಹಾಯಿ**

(ಗಗ ರೆರೆ ಸಾಸಾ ಧಧ ಪಪ ಗಗ ರೆರೆ ಸಾ– ) 3 ಸಲ ನುಡಿಸುವುದು (ಸಾರೆ ಗರೆ ಗ– ಸಾರೆ ಗರೆ ಗ– ಸಾರೆ ಗರೆ ) 3 ಸಲ ನುಡಿಸಿ ನಂತರ 'ಗ' ಅರ್ಥಾತ್ ಸಮ್‌ನಲ್ಲಿ ಅಂತ್ಯಗೊಳಿಸುವುದು.

## ಪ್ರಾಯೋಗಿಕ ತಬಲಾ ವಿಭಾಗ

### 1. ತಬಲಾದ ದಶವರ್ಣಗಳು

| | | | |
|---|---|---|---|
| 1. ತಾ ಅಥವಾ ನಾ. | 2. ತಿ | 3. ರ | 4. ಥುನ್ |
| 5. ತ ಅಥವಾ ನ | 6. ತಕ್ | 7. ಗೆ ಅಥವಾ ಘೆ | |
| 8. ಕ ಅಥವಾ ಕೆ.ಕಿ | 9. ಧಾ | 10. ಧಿನ್ | |

### 2. ತಾಲಲಿಪಿ ಹಾಗೂ ತಾಲಗಳ ಪರಿಚಯ

### 1. ದಾದರಾ ತಾಲ:

ಈ ತಾಲದಲ್ಲಿ ಆರು ಮಾತ್ರಾಗಳಿವೆ. ಎರಡು ಖಂಡಗಳನ್ನು ಹೊಂದಿದ್ದು ಅವು 3,3 ಮಾತ್ರಾಗಳಲ್ಲಿ ವಿಭಜನೆಯಾಗಿವೆ ಭರಿ (ಪೆಟ್ಟು) ಮೊದಲನೆಯ ಮಾತ್ರೆಗೆ ಇದೆ. ಖಾಲಿ (ಹುಸಿ) ನಾಲ್ಕನೆಯ ಮಾತ್ರೆಗೆ ಇದೆ. ಸಮ್ ಮೊದಲನೆಯ ಮಾತ್ರೆಯಾಗಿದೆ.

**ಠೇಕಾ**

| | | | | | |
|---|---|---|---|---|---|
| 1 | 2 | 3 | 4 | 5 | 6 |
| ಧಾ | ಧಿನ್ | ನಾ | ಧಾ | ತಿನ್ | ನಾ |
| × | | | 0 | | |

### 2. ಕೆಹರವಾ ತಾಲ:

ಈ ತಾಲದಲ್ಲಿ ಎಂಟು ಮಾತ್ರಾಗಳಿವೆ. ಎರಡು ಖಂಡಗಳನ್ನು ಹೊಂದಿದ್ದು ಅವು 4,4 ಮಾತ್ರಾಗಳಲ್ಲಿ ವಿಭಜನೆಯಾಗಿವೆ ಭರಿ (ಪೆಟ್ಟು) ಮೊದಲನೆಯ ಮಾತ್ರೆಗೆ ಇದೆ. ಖಾಲಿ (ಹುಸಿ) ಐದನೆಯ ಮಾತ್ರೆಗೆ ಇದೆ. ಸಮ್ ಮೊದಲನೆಯ ಮಾತ್ರೆಯಾಗಿದೆ.

**ಠೇಕಾ**

| | | | | | | | |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| ಧಾ | ಗೆ | ನಾ | ತಿ | ನಾ | ಕ | ಧಿನ್ | ನಾ |
| × | | | | 0 | | | |

**3. ತೀನ್ ತಾಲ್:**

ಈ ತಾಲದಲ್ಲಿ 16 ಮಾತ್ರಾಗಳಿವೆ. ನಾಲ್ಕು ಮಾತ್ರೆಗಳಿಗೆ ಒಂದು ಖಂಡದಂತೆ ಒಟ್ಟೂ 4 ಖಂಡಗಳನ್ನು ಹೊಂದಿದೆ. ಭರಿ, (ಪೆಟ್ಟು) 1, 5 ಹಾಗೂ 13 ನೆಯ ಮಾತ್ರೆಗಳಿಗೆ ಇವೆ. ಖಾಲಿ (ಹುಸಿ) 9ನೆಯ ಮಾತ್ರೆಗಿದೆ. ಸಮ್ ಮೊದಲನೆಯ ಮಾತ್ರೆಯಾಗಿದೆ.

**ಠೇಕಾ**

| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
|---|---|---|---|---|---|---|---|---|---|---|---|---|---|---|---|
| ಧಾ | ಧಿನ್ | ಧಿನ್ | ಧಾ | ಧಾ | ಧಿನ್ | ಧಿನ್ | ಧಾ | ಧಾ | ತಿನ್ | ತಿನ್ | ತಾ | ತಾ | ಧಿನ್ | ಧಿನ್ | ಧಾ |
| × | | | | 2 | | | | 0 | | | | 3 | | | |

**4. ಝಪ್ತಾಲ:**

ಈ ತಾಲದಲ್ಲಿ 10 ಮಾತ್ರೆಗಳಿವೆ. ನಾಲ್ಕು ಖಂಡಗಳನ್ನು ಹೊಂದಿದ್ದು ಅವು 2, 3, 2, 3 ರಂತೆ ವಿಭಜನೆಯಾಗಿವೆ. ಭರಿ (ಪೆಟ್ಟು) 1, 3 ಮತ್ತು 8ನೇ ಮಾತ್ರಾಗಳಿಗೆ ಇವೆ. ಖಾಲಿ (ಹುಸಿ) 6ನೆಯ ಮಾತ್ರೆಗಿದೆ. ಸಮ್ ಮೊದಲನೆಯ ಮಾತ್ರೆಯಾಗಿದೆ.

**ಠೇಕಾ**

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| ಧೀ | ನಾ | ಧೀ | ಧೀ | ನಾ | ತೀ | ನಾ | ಧೀ | ಧೀ | ನಾ |
| × | | 2 | | | 0 | | 3 | | |

**5. ಏಕ ತಾಲ:**

ಈ ತಾಲದಲ್ಲಿ 12 ಮಾತ್ರಾಗಳಿವೆ. 6 ಖಂಡಗಳನ್ನು ಹೊಂದಿದ್ದು ಅವು 2, 2, 2, 2, 2, 2 ರಂತೆ ವಿಭಜನೆಯಾಗಿವೆ. ಭರಿ (ಪೆಟ್ಟು) 1, 5, 9 ಹಾಗೂ 11 ನೇ ಮಾತ್ರಾಗಳಿಗಿವೆ. ಖಾಲಿ (ಹುಸಿ)ಯು 3 ಮತ್ತು 7ನೆಯ ಮಾತ್ರಾಗಳಿಗಿವೆ. ಸಮ್ ಮೊದಲನೆಯ ಮಾತ್ರೆಯಾಗಿದೆ.

**ಠೇಕಾ**

| 1 | 2 | 3 | 4 | 5 | 7 | 6 | 7 | 8 | 9 | 11 | 12 |
|---|---|---|---|---|---|---|---|---|---|---|---|
| ಧಿನ್ | ಧಿನ್ | ಧಾಗೆ | ತಿರಕಿಟ | ತೂ | ನಾ | ಕ | ತ್ತಾ | ಧಾಗೆ | ತಿರಕಿಟ | ಧಿನ್ | ನಾ |
| × | | 0 | | 2 | | 0 | | 3 | | 4 | |

**6. ಧುಮಾಳಿ ತಾಲ:**

ಈ ತಾಲದಲ್ಲಿ 8 ಮಾತ್ರಾಗಳಿವೆ. 4 ಖಂಡಗಳನ್ನು ಹೊಂದಿದ್ದು ಅವು 2, 2, 2, 2 ರಂತೆ ವಿಭಜನೆಯಾಗಿವೆ. ಭರಿ (ಪೆಟ್ಟು) 1, 3 ಹಾಗೂ 7 ನೇ ಮಾತ್ರಾಗಳಿಗಿವೆ. ಖಾಲಿ (ಹುಸಿ)ಯು 5 ನೆಯ ಮಾತ್ರೆಗಿದೆ. ಸಮ್ ಮೊದಲನೆಯ ಮಾತ್ರೆಯಾಗಿದೆ.

| | | | | **ಠೇಕಾ** | | | |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| ಧಾ | ಧಿನ್ | ಧಾ | ತಿನ್ | ತ್ರಕ | ಧಿನ್ | ಧಾಗೆ | ತಿರಕಿಟ |
| × | | 2 | | 0 | | 3 | |

**7. ಭಜನ್ ಠೇಕಾ:**

ಈ ತಾಲದಲ್ಲಿ 8 ಮಾತ್ರಾಗಳಿವೆ. 2 ಖಂಡಗಳನನ್ನು ಹೊಂದಿದ್ದು ಅವು 4 4 ರಂತೆ ವಿಭಜನೆಯಾಗಿವೆ. ಭರಿ (ಪೆಟ್ಟು) 1ನೇ ಮಾತ್ರೆಗಿದೆ. ಖಾಲಿ (ಹುಸಿ)ಯು 5 ನೆಯ ಮಾತ್ರೆಗಿದೆ. ಸಮ್ ಮೊದಲನೆಯ ಮಾತ್ರೆಯಾಗಿದೆ.

| | | | | **ಠೇಕಾ** | | | |
|---|---|---|---|---|---|---|---|
| | | S | | | | | |
| 1 | 2 | 3 | 4 | 5 | 6 | 7 | 8 |
| ಧಿನ್ | ತಾಧಿನ್ | ಧಿನ್ | ಧಾS | ಧಿನ್ | ತಾತಿನ್ | Sತಿನ್ | ತಾS |
| × | | | | 0 | | | |

**3. ತಾಲಗಳ ದುಗುನ್**

**ಉದಾಹರಣೆ 1. ದಾದರಾ ತಾಲ:**

| | | | | | | |
|---|---|---|---|---|---|---|
| | 1 | 2 | 3 | 45 | 6 | |
| ಮೂಲ ಲಯ | ಧಾ | ಧಿನ್ | ನಾ | ಧಾ | ತಿನ್ | ನಾ |
| | × | | | 0 | | |
| ದುಗುನ್ ಲಯ | ಧಾಧಿನ್ | ನಾ,ಧಾ | ತಿನ್ನಾ | ಧಾಧಿನ್ | ನಾ,ಧಾ | ತಿನ್ನಾ |

**4. ಬದಲ್ ಠೇಕಾಗಳು**

**ಉದಾಹರಣೆ 2. ದಾದರಾ ತಾಲ:**

| | | | | | | |
|---|---|---|---|---|---|---|
| **ಠೇಕಾ :** | ಧಾ | ಧಿನ್ | ನಾ | ಧಾ | ತಿನ್ | ನಾ |
| **ಬದಲ್ ಠೇಕಾ : 1.** | ಧಾ | ಧಿನ್ | ನಾನಾ | ಧಾ | ತಿನ್ | ನಾನಾ |
| । **2.** | ಧಾಗೆ | ಧಿನ್ | ನಾನಾ | ಧಾಗೆ | ತಿನ್ | ನಾನಾ |

**15. ಕಾಯದಾ**

**ಉದಾಹರಣೆ 3. ದಿಲ್ಲಿ ಕಾಯದಾ, ತೀನತಾಲ**

| | | | | |
|---|---|---|---|---|
| **ಮುಖ :–** | ಧಾತಿಟಧಾ | ತಿಟಧಾಧಾ | ತಿಟಧಾಗೆ | ತಿನ್ನಾಕಿನಾ । |
| | ತಾತಿಟತಾ | ತಿಟತಾತಾ | ತಿಟಧಾಗೆ | ಧಿನ್ನಾಗಿನಾ । |

**ಪಲ್ಟಾ :–**

| | | | | |
|---|---|---|---|---|
| 1. | ಧಾತಿಟಧಾ | ತಿಟಧಾಧಾ | ಧಾತಿಟಧಾ | ತಿಟಧಾಧಾ । |
| | ಧಾತಿಟಧಾ | ತಿಟಧಾಧಾ | ತಿಟಧಾಗೆ | ತಿನ್ನಾಕಿನಾ । |
| | ತಾತಿಟತಾ | ತಿಟತಾತಾ | ತಾತಿಟತಾ | ತಿಟತಾತಾ । |
| | ಧಾತಿಟಧಾ | ತಿಟಧಾಧಾ | ತಿಟಧಾಗೆ | ಧಿನ್ನಾಗಿನಾ । |
| 2. | ಧಾತಿಟಧಾ | ತಿಟಧಾಧಾ | ತಿಟಧಾಧಾ | ತಿಟಧಾಧಾ। |
| | ಧಾತಿಟಧಾ | ತಿಟಧಾಧಾ | ತಿಟಧಾಗೆ | ತಿನ್ನಾಕಿನಾ । |
| | ತಾತಿಟತಾ | ತಿಟತಾತಾ | ತಿಟತಾತಾ | ತಿಟತಾತಾ। |
| | ಧಾತಿಟಧಾ | ತಿಟಧಾಧಾ | ತಿಟಧಾಗೆ | ಧಿನ್ನಾಗಿನಾ । |
| 3. | ತಿಟಧಾಧಾ | ತಿಟಧಾಧಾ | ಧಾತಿಟಧಾ | ತಿಟಧಾಧಾ। |
| | ಧಾತಿಟಧಾ | ತಿಟಧಾಧಾ | ತಿಟಧಾಗೆ | ತಿನ್ನಾಕಿನಾ । |
| | ತಿಟತಾತಾ | ತಿಟತಾತಾ | ತಾತಿಟತಾ | ತಿಟತಾತಾ । |
| | ಧಾತಿಟಧಾ | ತಿಟಧಾಧಾ | ತಿಟಧಾಗೆ | ಧಿನ್ನಾಗಿನಾ ॥ |
| 4. | ತಿಟಧಾಧಾ | ತಿಟಧಾಧಾ | ತಿಟತಿಟ | ಧಾಧಾತಿಟ। |
| | ಧಾತಿಟಧಾ | ತಿಟಧಾಧಾ | ತಿಟಧಾಗೆ | ತಿನ್ನಾಕಿನಾ । |
| | ತಿಟತಾತಾ | ತಿಟತಾತಾ | ತಿಟತಿಟ | ತಾತಾತಿಟ। |
| | ಧಾತಿಟಧಾ | ತಿಟಧಾಧಾ | ತಿಟಧಾಗೆ | ಧಿನ್ನಾಗಿನಾ ॥ |

| | | | | |
|---|---|---|---|---|
| 5. | ಧಾಧಾತಿಟ | ಧಾಧಾತಿಟ | ತಿಟತಿಟ | ಧಾಧಾತಿಟ। |
| | ಧಾತಿಟಧಾ | ತಿಟಧಾಧಾ | ತಿಟಧಾಗೆ | ತಿನ್ನಾಕಿನಾ । |
| | ತಾತಾತಿಟ | ತಾತಾತಿಟ | ತಿಟತಿಟ | ತಾತಾತಿಟ। |
| | ಧಾತಿಟಧಾ | ತಿಟಧಾಧಾ | ತಿಟಧಾಗೆ | ಧಿನ್ನಾಗಿನಾ ॥ |

**ತಿಹಾಯಿ:–**

| | | | |
|---|---|---|---|
| ಧಾತಿಟಧಾ | ತಿಟಧಾಧಾ | ತಿಟಧಾಗೆ | ತಿನ್ನಾಕಿನಾ। |
| ತಾತಿಟತಾ | ತಿಟತಾತಾ | ತಿಟಧಾಗೆ | ಧಿನ್ನಾಗಿನಾ । |
| ತಿಟಧಾಗೆ | ತಿನ್ನಾಕಿನಾ | ಧಾ | ತಿಟಧಾಗೆ। |
| ತಿನ್ನಾಕಿನಾ | ಧಾ | ತಿಟಧಾಗೆ | ತಿನ್ನಾಕಿನಾ ॥ |

## 6. ಸಾಥ ಸಂಗತ್

ಗೀತೆಯ (ಬಂದಿಶ್) ಲಯ, ತಾಲಗಳನ್ನು ಗುರ್ತಿಸುವುದರೊಂದಿಗೆ ಪ್ರಾರಂಭಿಕ ಸ್ಥಾನವನ್ನು (ಸಮ್) ಗುರ್ತಿಸಿ ಅಲ್ಲಿಂದ ತಾಲದ ಠೇಕಾವನ್ನು ನುಡಿಸಬೇಕಾಗುತ್ತದೆ.

**ಉದಾಹರಣೆ 4. ಸಾಥಸಂಗತ್, ತೀನ್‌ತಾಲ**

| | | | | | | | | | |
|---|---|---|---|---|---|---|---|---|---|
| ಕೋ | ಯ | ಲಿ | ಯಾ | । | ಬೋ | ಲೇ | ಅಂ | ಬು | । |
| ಧಾ | ತಿನ್ | ತಿನ್ | ತಾ | । | ತಾ | ಧಿನ್ | ಧಿನ್ | ಧಾ | । |
| ಔ | | | | | 3 | | | | |
| ವಾ | , | , | ಡಾ | । | , | ರ | ಪ | ರ | । |
| ಧಾ | ಧಿನ್ | ಧಿನ್ | ಧಾ | । | ಧಾ | ಧಿನ್ | ಧಿನ್ | ಧಾ | । |
| ಧ | | | | | 2 | | | | |

**ಮಾದರಿ ಪ್ರಶ್ನೆ ಪತ್ರಿಕೆ**

**ವರ್ಗ: ಪ್ರಥಮ ಪಿ.ಯು.ಸಿ.**

**ವಿಷಯ : ಹಿಂದೂಸ್ತಾನಿ ಸಂಗೀತ**

**ಅವಧಿ : 1 ಘಂಟೆ 45 ನಿಮಿಷ**

**ಗರಿಷ್ಠ ಅಂಕಗಳು : 30**

**ಸೂಚನೆಗಳು :**

1. ಗಾಯನ, ತಬಲಾ ಹಾಗೂ ಸಿತಾರ ವಿಭಾಗಗಳಿಗೆ ಸಾಮಾನ್ಯ
2. ಬೇಕಾದ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ.
3. ಮೊದಲನೇ ಪ್ರಶ್ನೆ ಕಡ್ಡಾಯ
4. ಎಲ್ಲಾ ಪ್ರಶ್ನೆಗಳಿಗೆ ಸಮಾನ ಗುಣಗಳು.

**ಪ್ರಶ್ನೆ1)** ಕೆಳಗಿನ ಯಾವುದೇ ಒಂದು ರಾಗದ ಛೋಟಾಖ್ಯಾಲ್ ಅಥವಾ ರಜಾಖಾನೀ ಗತ್ತನ್ನು ರಾಗ ಪರಿಚಯದೊಂದಿಗೆ, 2 ಅಲಾಪ ಹಾಗೂ 2 ತಾನ್‌ಗಳ ಸಹಿತ ಸ್ವರಲಿಪಿ ಪದ್ಧತಿಯಲ್ಲಿ ಬರೆಯಿರಿ. (10 ಅಂಕಗಳು)

1. ಭೂಪ 2. ಬೃಂದಾವನಿ ಸಾರಂಗ

ಅಥವಾ

ಕೆಳಗಿನ ಯಾವುದೇ ಮೂರು ತಾಲಗಳ ಪರಿಚಯದೊಂದಿಗೆ ಆ ತಾಲಗಳ ಠೇಕಾಗಳನ್ನು ತಾಲ-ಲಿಪಿ ಪದ್ಧತಿಯಲ್ಲಿ ಬರೆಯಿರಿ.

1. ತೀನ್‌ತಾಲ 2. ಝಪ್‌ತಾಲ 3. ದಾದರಾ 4. ಕೆಹರವಾ 5. ಏಕತಾಲ (10 ಅಂಕಗಳು)

**ಪ್ರಶ್ನೆ2)** ಸಂಗೀತದ ಉತ್ಪತ್ತಿಯನ್ನು ಪೌರಾಣಿಕ ಹಾಗೂ ವೈಜ್ಞಾನಿಕ ದೃಷ್ಟಿಯಲ್ಲಿ ವಿಮರ್ಶಿಸಿರಿ. (10 ಅಂಕಗಳು)

**ಪ್ರಶ್ನೆ3)** ಈ ಕೆಳಕಾಣಿಸಿದ ಯಾವುದೇ ಒಬ್ಬರು ಮಹಾನ್ ಸಂಗೀತಜ್ಞರ ಜೀವನ ಚರಿತ್ರೆಯನ್ನು ಬರೆಯಿರಿ. (10 ಅಂಕಗಳು)

1) ತಾನಸೇನ್, 2) ಪಂ. ಭೀಮಸೇನ ಜೋಶಿ, 3) ಪಂ. ರವಿಶಂಕರ, 4) ಪಂ. ಬಸವರಾಜ ರಾಜಗುರು, 5) ಉ. ಅಲ್ಲಾರಖಾ

**ಪ್ರಶ್ನೆ 4)** ಅ) ಹೊಂದಿಸಿ ಬರೆಯಿರಿ. (5 ಅಂಕಗಳು )

| | |
|---|---|
| 1)ದಾದರಾ | ಅ) ತಾಲದ ಮೊದಲನೇ ಮಾತ್ರೆ |
| 2)ತಾನಸೇನ | ಬ) 6 ಮಾತ್ರೆಗಳು |
| 3)ಸಮ್ | ಕ) ನಾಟ್ಯಶಾಸ್ತ್ರ |
| 4)ಭರತ | ಡ) ವಿತತ ವಾದ್ಯ |
| 5)ವಾಯೋಲಿನ್ | ಇ) ಸಂಗೀತ ಸಾಮ್ರಾಟ್ |

**ಬ. ಬಿಟ್ಟಸ್ಥಳ ತುಂಬಿರಿ** (5 ಅಂಕಗಳು)

1. ತೀನ್‌ತಾಲಕ್ಕೆ _______________ ಮಾತ್ರೆಗಳಿವೆ.
2. ಹುಸಿಯನ್ನು _______________ ಹೀಗೆ ಸೂಚಿಸುತ್ತಾರೆ.
3. ತಾಲದ ಸೂಕ್ಷ್ಮ ಸಮಾನ ಭಾಗಗಳಿಗೆ _______________ ಎನ್ನುತ್ತಾರೆ.
4. ಸ್ವರಗಳ ಏರಿಕೆ ಕ್ರಮಕ್ಕೆ _______________ ಎನ್ನುವರು.
5. ತಬಲಾ ವಾದ್ಯವು _______________ ವರ್ಗಕ್ಕೆ ಸೇರುತ್ತದೆ.

**ಪ್ರಶ್ನೆ ಪತ್ರಿಕೆಗಳ ಉತ್ತರಗಳು**

**ಪ್ರಶ್ನೆ 4) ಅ) ಹೊಂದಿಸಿ ಬರೆಯಿರಿ.**

| | | |
|---|---|---|
| 1. | ದಾದರಾ | ಬ) 6 ಮಾತ್ರೆಗಳು |
| 2. | ತಾನಸೇನ | ಇ) ಸಂಗೀತ ಸಮ್ರಾಟ್ |
| 3. | ಸಮ್ | ಅ) ತಾಳದ ಮೊದಲನೇ ಮಾತ್ರೆ |
| 4. | ಭರತ | ಕ) ನಾಟ್ಯಶಾಸ್ತ್ರ |
| 5. | ವಾಯೋಲಿನ್ | ಡ. ವಿತತ್ ವಾದ್ಯ |

**ಬ) ಬಿಟ್ಟಸ್ಥಳ ತುಂಬಿರಿ**

1) ತೀನತಾಲಕ್ಕೆ 16 ಮಾತ್ರೆಗಳಿವೆ.

2) ಹುಸಿಯನ್ನು 0 ಸೂಚಿಸುತ್ತಾರೆ.

3) ತಾಲದ ಸೂಕ್ಷ್ಮಸಮಾನ ಭಾಗಗಳಿಗೆ ಮಾತ್ರೆ ಎನ್ನುತ್ತಾರೆ.

4) ಸ್ವರಗಳ ಏರಿಕೆ ಕ್ರಮಕ್ಕೆ ಆರೋಹ ಎನ್ನುವರು.

5) ತಬಲಾ ವಾದ್ಯವು ಅವನದ್ಧ ವರ್ಗಕ್ಕೆ ಸೇರುತ್ತದೆ.

## ಗ್ರಂಥಋಣ


1. ಸಂಗೀತ ಶಾಸ್ತ್ರ ಭಾಗ 1–2; ಪಂ. ಎ.ಎಂ.ಪುರಂದರೆ
2. ಭಾರತೀಯ ವಾದ್ಯಗಳು; ಪಂ ಎ.ಎಂ.ಪುರಂದರೆ
3. ಸಂಗೀತ ಶಾಸ್ತ್ರ ದರ್ಪಣ; ಪ್ರೋ. ಎ.ಯು.ಪಾಟೀಲ
4. ಭಾರತೀಯ ಸಂಗೀತ ಚರಿತ್ರೆ; ಡಾ॥ ಬಿ.ಡಿ.ಪಾಠಕ
5. ರಾಗ ದೀಪಿಕೆ; ಡಾ॥ ಹನುಮಣ್ಣನಾಯಕ ದೊರೈ
6. ಸಂಗೀತ ಸಂಜೀವಿವನ; ಪ್ರೋ. ರಾಜೀವ ಹಿರೇಮಠ
7. ಹಿಂದುಸ್ತಾನ ಸಂಗೀತಗಾರರು; ಪ್ರೋ. ಸಿದ್ಧರಾಮಯ್ಯ ಮಠಪತಿ
8. ಹಿಂದುಸ್ತಾನ ಸಂಗೀತ; ಪಂ. ಮೃತ್ಯುಂಜಯ ಪುರಾಣಿಕಮಠ
9. ತಬಲಾ ಶಾಸ್ತ್ರ ವಿಶಾರದ; ಪಂ. ರಾಜೀವ ಪುರಂದರೆ
10. ಸಂಗೀತ ಶಾಸ್ತ್ರ ಪರಿಚಯ; ವಿ. ರಾಮಕೃಷ್ಣ, ಆರ್. ಎನ್.ದೊರೆಸ್ವಾಮಿ
11. ಕರ್ನಾಟಕಿ ಸಂಗೀತ ಸುಧಾ; ಪಿ.ರಾಮರತ್ನಂ, ಎನ್.ಸಂಪತ್‌ಕುಮಾರ್
12. ಕರ್ನಾಟಕ ಪ್ರೌಢಶಿಕ್ಷಣ ಮಂಡಳಿ ಜ್ಯೂನಿಯರ್ ಗ್ರೇಡ್ ಪಠ್ಯಪುಸ್ತಕ







# ನಾಯಿ ಕಚ್ಚುವಿಕೆಯನ್ನು ತಡೆಯುವುದು






- ಬೀದಿ ನಾಯಿಗಳನ್ನು ಮುಟ್ಟಬೇಡಿ ಅಥವಾ ಅದರೊಂದಿಗೆ ಆಟವಾಡಬೇಡಿ.
- ನಾಯಿಗಳನ್ನು ನೇರ ದೃಷ್ಟಿಯಿಂದ ನೋಡಬೇಡಿ ಮತ್ತು ಅವುಗಳನ್ನು ಕಂಡು ಕಿರಚಬೇಡಿ.
- ಅವುಗಳಿಗೆ ತಿಂಡಿ ತಿನಿಸುಗಳನ್ನು ಕೊಡಲು ಅವುಗಳ ಸನಿಹ ಹೋಗಬೇಡಿ.
- ಕಲ್ಲು ಹಾಗೂ ಕೋಲು ಗಳನ್ನು ಅವುಗಳ ಮೇಲೆ ಎಸೆಯುವ ಮೂಲಕ ಅವುಗಳನ್ನು ಪ್ರಚೋದಿಸಬೇಡಿ.
- ನಾಯಿಗಳ ಸನಿಹ ಅಥವಾ ಅವುಗಳಿಂದ ದೂರ ಓಡಬೇಡಿ.
- ತಿನಿಸುಗಳನ್ನು ಅಥವಾ ಆಟದ ಸಾಮಾನುಗಳನ್ನು ನಾಯಿಯ ಹತ್ತಿರ ತೆಗೆದುಕೊಂಡು ಹೋಗಬೇಡಿ.
- ನಾಯಿಮರಿಗಳ ಹತ್ತಿರ ಹೋಗಬೇಡಿ ಮತ್ತು ಅವುಗಳನ್ನು ಮುಟ್ಟಬೇಡಿ.
- ನಾಯಿಯು ನಿಮ್ಮ ಹತ್ತಿರ ಬಂದರೆ ಮರದಂತೆ ನೆಟ್ಟಗೆ ನಿಂತುಬಿಡಿ. ನಾಯಿಗಳು ಸಾಮಾನ್ಯವಾಗಿ ಮೂಸಿನೋಡಿ ಹೊರಟು ಹೋಗುತ್ತವೆ.
- ನಾಯಿ ಅಥವಾ ನಾಯಿಗಳ ಗುಂಪು ಆಕ್ರಮಣ ಮಾಡಿದರೆ ದುಂಡಗೆ ಮುದುಡಿಕೊಳ್ಳಿ ಹಾಗೂ ನಿಮ್ಮ ಮುಖ ಮತ್ತು ಕುತ್ತಿಗೆಯನ್ನು ರಕ್ಷಿಸಿಕೊಳ್ಳಿ.
- ಸಾಕುನಾಯಿಯ ಹತ್ತಿರ ಆಟವಾಡಬೇಕಾದರೆ ಹಿರಿಯರ ಸಮ್ಮುಖದಲ್ಲಿ ಆಡಿ.









**ನಾಯಿ ಕಚ್ಚುವುದು ಅಪಾಯಕರ/ಮಾರಣಾಂತಿಕ**

**ೇಬಿಸ್‌ನಿಂದ ನಿಮ್ಮ ಜೀವನವನ್ನು ಸಂರಕ್ಷಿಸಿಕೊಳ್ಳಲು 2 ಹೆಜ್ಜೆಗಳನ್ನು ಅನುಸರಿಸಿ.**

**ಹೆಜ್ಜೆ : 1**

❖ ಕಚ್ಚಿದ ಗಾಯವನ್ನು ತಕ್ಷಣ ಸೋಪು ಮತ್ತು ನೀರಿನಿಂದ ಚೆನ್ನಾಗಿ ತೊಳೆಯಿರಿ.

❖ ಡೆಟಾಲ್, ಸ್ಯಾವಲಾನ್ ಅಥವಾ ಪೊವಿಡಿನ್ ಐಯೋಡಿನ್ ನಂತಹ ಕ್ರಿಮಿನಾಶಕಗಳನ್ನು ಹಚ್ಚಿರಿ.

**ಹೆಜ್ಜೆ : 2**

**ಹೆಚ್ಚಿನ ಚಿಕಿತ್ಸೆಗಾಗಿ ಸಾಧ್ಯವಾದಷ್ಟು ಬೇಗನೇ ವೈದ್ಯರನ್ನು ಭೇಟಿ ಮಾಡಿ.**





➢ ರೇಬಿಸ್ ನಿರೋಧಕ ಲಸಿಕೆಯ ಚುಚ್ಚುಮದ್ದಿನ ಸಂಪೂರ್ಣ ಕೋರ್ಸ್‌ನ್ನು ತೋಳಿಗೆ ಹಾಕಿಸಿಕೊಳ್ಳಿ.

➢ ರಕ್ತ ಬಂದಿರುವ ಗಾಯಗಳಿಗೆ ಹಾಗೂ ಅದರ ಸುತ್ತ ರೇಬೀಸ್ ಇಮ್ಯುನೋಗ್ಲೊಬ್ಯುಲಿನ್ ಚುಚುಮದ್ದನ್ನು ಪಡೆಯಿರಿ.